ದಿನಾಂಕಃ-10-03-2022 ರಂದು ಪುನಃ ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಸಾಕ್ಷಿಗೆ ಕನ್ನಡ ಭಾಷೆ ಬರುವುದಿಲ್ಲ ಮರಾಠಿ ಭಾಷೆ ಬರುತ್ತದೆ. ಶ್ರೀ.ಡಿ.ಟಿ.ಬಿ ವಕೀಲರನ್ನು ಅನುವಾದಕರನ್ನಾಗಿ ನೇಮಿಸಲಾಯಿತು.

<u>ಮುಂದುವರೆದ ಪಾಟೀ ಸವಾಲುಃ-ಶ್ರೀ.ಎಮ್.ಜಿ.ಕೆ ವಕೀಲರಿಂದ ವಾದಿ ಪರವಾಗಿ</u>

- ಶಾಂತಾಬಾಯಿ ಇವರಿಗೆ ನನ್ನನ್ನು ವಾದಿಯನ್ನು ದತ್ತಿ ಅಥವಾ ನ್ಯಾಸ ಮಂಡಳಿಯಲ್ಲಿ ಸೇರಿಸಿಕೊಳ್ಳುವ ವಿಚಾರವೇ ಇರಲಿಲ್ಲ ಎಂದರೆ ಸರಿಯಲ್ಲ. ಈ ವಿಷಯವನ್ನು ಮೃತ್ಯುಪತ್ರ ಮಾಡುವ ಪೂರ್ವದಲ್ಲಿ ನನಗಾಗಲೀ, ವಾದಿಗಾಗಲೀ ಹೇಳಿದ್ದರೆಂದರೆ ಸಾಕ್ಷಿ ನನಗೆ 8 ದಿನದ ಮೊದಲು ಹೇಳಿದ್ದರು, ವಾದಿಗೆ ಹೇಳಿದ ವಿಚಾರ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 8 ದಿನಗಳ ಮೊದಲು ಶಾಂತಾಬಾಯಿಯವರು ನನಗೆ ವಿಷಯ ತಿಳಿಸಿದ ಬಗ್ಗೆ ಕೈಪಿಯತನಲ್ಲಿ ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಶಾಂತಾಬಾಯಿ ಇವರ ಮಾನಸಿಕ ಮತ್ತು ದೈಹಿಕ ಸ್ಥಿತಿಗತಿಗಳನ್ನು ಅರಿತುಕೊಂಡು ನನಗೆ ಬೇಕಾದ ರೀತಿಯಲ್ಲಿ ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವೈದ್ಯರ ದೃಢೀಕರಣ ಪತ್ರವನ್ನು ನಮಗೆ ಅನುಕೂಲ ಆಗುವ ರೀತಿಯಲ್ಲಿ ಬರೆಯಿಸಿ ಪಡೆದಿದ್ದೇವೆ ಎಂದರೆ ಅದನ್ನು ನಮಗೆ ಅನುಕೂಲ ಆಗುವ ರೀತಿಯಲ್ಲಿ ಬರೆಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಶಾಂತಾಬಾಯಿಯವರು ಸ್ವತಃ ವೈದ್ಯಕೀಯ ಪ್ರಮಾಣ ಪತ್ರ ಪಡೆದಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಶಾಂತಾಬಾಯಿ ಮತ್ತು ಸಹೋದರರಿಗೆ ತಿಳಿಯಬಾರದು ಎಂದು ವೈದ್ಯರ ಪ್ರಮಾಣ ಪತ್ರವನ್ನು ನಾವು ಮಿಲಾಪಿಯಾಗಿ ಖೊಟ್ಟಿಯಾಗಿ ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ. ಶಾಂತಾಬಾಯಿಯವರಿಗೆ ಮಾನಸಿಕ ಅಸ್ವಸ್ಥತೆ ಇರುವ ಕಾರಣದಿಂದ ಮೃತ್ಯುಪತ್ರದಲ್ಲಿನ ಅಂಕಿ-ಅಂಶಗಳ ಬಗ್ಗೆ ಮಾಹಿತಿ ಇರಲಿಲ್ಲ ಎಂದರೆ ಸರಿಯಲ್ಲ. ಶಾಂತಾಬಾಯಿ ಮತ್ತು ವಕೀಲರಿಗೆ ಯಾವತ್ತು ಸಂಪರ್ಕ ಇರಲಿಲ್ಲ ಎಂದರೆ ಸಾಕ್ಷಿಯು ಮೃತ್ಯುಪತ್ರದ ಬಗ್ಗೆಯು ಹಲವಾರು ಬಾರೀ ಸಂಪರ್ಕಿಸಿದ್ದರು ಎಂದು ಹೇಳುತ್ತಾರೆ. ಮೃತ್ಯುಪತ್ರ ಮಾಡಿದ ವಕೀಲರ ವಿರುದ್ದ ಕರ್ನಾಟಕ ರಾಜ್ಯ ವಕೀಲರ ಪರಿಷತ್ ವಿಚಾರಣೆ ಮಾಡಿ ಶಿಕ್ಷೆ ಗುರಿಪಡಿಸಿದ್ದು ಅದನ್ನು ನಾನು ನಮ್ಮ ವಕೀಲರ ಮುಖಾಂತರ ಓದಿಸಿ ತಿಳಿದುಕೊಂಡಿದ್ದೇನೆ.

2. ಶಾಂತಾಬಾಯಿಯವರ ಸಹೋದರ ಡಾ-ರಮಣ್ ಇವರ ಹಾಗೂ ಸುಜೀತ ಇವರ ಮೌಖಿಕ ಸಾಕ್ಷಿ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ವಕೀಲರನ್ನು ಮತ್ತು ಸಾಕ್ಷಿದಾರರನ್ನು ಕೇಳಿ ಮಾಡಿಸುತ್ತೇನೆ. ಸುಜೀತ ಮತ್ತು ಡಾ-ರಮಣ್‌ರವರಿಗೆ ನ್ಯಾಯಾಲಯದಿಂದ ಸಾಕ್ಷಿ ನುಡಿಯಲು ಸಮನ್ಸ ತೆಗೆದುಕೊಂಡಿದ್ದೇನೆ ಎಂದರೆ ಸರಿ. ಸಮನ್ಸ ಜಾರಿ ಆದ ನಂತರ ಡಾ-ರಮಣ್ ವಿಚಾರಿಸಿದ್ದು ಅವರ ಶ್ರವಣ ಶಕ್ತಿ ಕುಂದಿದ್ದು ಸಾಕ್ಷಿ ಹೇಳಲು ಆಗುವುದಿಲ್ಲ ಎಂದು ಹೇಳಿದರು, ಸುಜೀತರವರನ್ನು ವಿಚಾರಣೆ ಮಾಡಿಲ್ಲ. ಡಾ-ರಮಣರವರ ಶ್ರವಣ ಶಕ್ತಿ ಕುಂದಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಮೃತ್ಯುಪತ್ರ ಖೊಟ್ಟಿ ಸೃಷ್ಠಿಸಿಕೊಂಡಿದ್ದಕ್ಕಾಗಿ ನನ್ನ ಮೇಲೆ ಅವರು ಕೋಪಗೊಂಡಿದ್ದಾರೆ ಎಂದರೆ ಸರಿಯಲ್ಲ. ಮೃತ್ಯುಪತ್ರ ಖೊಟ್ಟಿಯಾಗಿ ಸೃಷ್ಠಿಸಿಕೊಂಡಿದ್ದು ಡಾ-ರಮಣರವರು ಬಂದರೆ ನಿಜವಾದ ವಿಷಯ ಗೊತ್ತಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೃತ್ಯುಪತ್ರ ಖೊಟ್ಟಿಯಾಗಿ ತಯಾರಿಸಿದ ನಂತರ ನನಗೆ ವಕೀಲರ ಮುಖಾಂತರ ತಿಳುವಳಿಕೆ ಕೊಡಿಸಿದ್ದರು ಎಂದರೆ ಸರಿಯಲ್ಲ. ಕಾರ್ಪೊರೇಶನ ಬ್ಯಾಂಕಿಗೂ ಸಹ ತಿಳುವಳಿಕೆ ಕೊಟ್ಟಿದ್ದರು ಎಂದರೆ ಸರಿ. ಮೃತ್ಯುಪತ್ರವನ್ನು ನನಗೆ ಬೇಕಾದ ರೀತಿಯಲ್ಲಿ ನಾನೇ ಅದರ ಸೂತ್ರದಾರನಾಗಿ ಸೃಷ್ಠಿಸಿಕೊಂಡಿದ್ದೇನೆ ಎಂದರೆ ಸರಿಯಲ್ಲ. ವಾದಿ ಶಾಂತಿಲಾಲ ಇವರ ಸಹೋದರನಾಗಿದ್ದು ಕಾನೂನು ರೀತಿಯ ವಾರಸುದಾರನಾದ ಕಾರಣ ಸ್ವತ್ತನ್ನು ವಾರಸಾ ನಾತೆಯಿಂದ ಬರಬೇಕು ಎಂದು ದಾವೆಯಲ್ಲಿ ದಾಖಲ ಮಾಡಿದ್ದಾರೆ ಎಂದರೆ ಸರಿ. ಮೃತ್ಯುಪತ್ರ ಖೊಟ್ಟಿ ಇದೆ ಅಂತಲೂ ವಾದಿ ಸಾಧನೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಮೃತ್ಯುಪತ್ರದಲ್ಲಿನ ಸತ್ಯಾಸತ್ಯತೆ ಹಾಗೂ ಮೃತ್ಯುಪತ್ರವನ್ನು ಪಾರದರ್ಶಕತೆ, ಸಾಮರ್ಥ್ಯ ಇದರ ಬಗ್ಗೆ ವಾದಿ ತಮ್ಮ ವಾದ ಪತ್ರದಲ್ಲಿ ಅಲ್ಲಗೆಳೆದಿದ್ದಾರೆ ಎಂದರೆ ಇರಬಹುದು.

<u>ಪಾಟೀ ಸವಾಲುಃ-ಶ್ರೀ.ಎ.ಆರ್.ಟಿ ವಕೀಲರಿಂದ ಪ್ರತಿವಾದಿ-3 ಪರವಾಗಿ</u>

- 3 ನೇ ಪ್ರತಿವಾದಿ ವಾದಿಯ ಹಿರಿಯ ಅಣ್ಣ ರೂಪಚಂದ ಅವರ ಸೊಸೆಯಾಗಬೇಕು. 3 ನೇ ಪ್ರತಿವಾದಿ ಶಾಂತಾಬಾಯಿಯವರ ಸಹೋದರನ ಸೊಸೆ ಆದ ಕಾರಣ ಅವರ ಸೊಸೆಯು ಆಗುತ್ತಾರೆ. 3 ನೇ ಪ್ರತಿವಾದಿಯ ವಿಚಾರವಾಗಿ ಯಾವುದೇ ಉಲ್ಲೇಖ ಮಾಡಿಲ್ಲ ಎಂದರೆ ಸರಿ.

ರೂಪಚಂದರವರ ಸೊಸೆ ಇರುವ ಕಾರಣ ಆಕೆಯು ಶಾಂತಾಬಾಯಿಯವರ ಸೊಸೆ ಆದ ಕಾರಣ ಆಕೆಯು ಸಹ ಹಕ್ಕುದಾರಳು ಆಗುತ್ತಾಳೆ ಎಂದರೆ ನನಗೆ ಗೊತ್ತಿಲ್ಲ. ಮೃತ್ಯುಪತ್ರ ಖೊಟ್ಟಿಯಾಗಿ ನಾನು, 1 ನೇ ಪ್ರತಿವಾದಿ, ವಾದಿ ಮಿಲಾಪಿಯಾಗಿ ಖೊಟ್ಟಿಯಾುಗಿ ಸೃಷ್ಠಿಸಿಕೊಂಡಿದ್ದೇವೆ ಎಂದರೆ ಸರಿಯಲ್ಲ.

ಉಳಿದಂತೆ ಶ್ರೀ.ಎಮ್.ಜಿ.ಕೆ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಮೋದಿಸಿಕೊಳ್ಳುತ್ತಾರೆ.

ಸಾಕ್ಷಿಗೆ ಅನುವಾದಕರಾದ ಶ್ರೀ.ಡಿ.ಟಿ.ಬಿ ವಕೀಲರು ಸಾಕ್ಷ್ಯವನ್ನು ಸಾಕ್ಷಿಗೆ ಮರಾಠಿ ಭಾಷೆಯಲ್ಲಿ ಓದಿ ಹೇಳಿರುತ್ತಾರೆ. ಸಾಕ್ಷ್ಯವನ್ನು ಕೇಳಿ ಸರಿ ಇರುತ್ತವೆ ಎಂದು ಸಾಕ್ಷಿಯು ಸಹಿ ಮಾಡಿರುತ್ತಾರೆ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ ಇದೆ ಅಂತಾ ಒಪ್ಪಿ ರುವರು.

ಸಹಿ/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಜಮಖಂಡಿ

ಸಾಕ್ಷಿಯ ಸಹಿ